# ರಡ್ಡಿ ಸಹಕಾರ ಬ್ಯಾಂಕ ನಿಯಮಿತ, ದಾರವಾಡ

ಪ್ರಧಾನ ಕಛೇರಿ, ಬ್ಯಾಂಕ ರೋಡ, ಧಾರವಾಡ -580001

ದೂರವಾಣಿ: 0836-2743475/2448118, E – Mail – ID – ceo@raddibank.com


ನಂ.RSBN/ HO/ EST/ Recruitment/ 651 /2023-2024 ದಿನಾಂಕ: 24-07-2023

## ನೇಮಕಾತಿ ಪ್ರಕಟಣೆ

ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು, ಇವರ ಅನುಮತಿ ಆದೇಶ ಸಂಖ್ಯೆ **ಆರ್‌ಸಿಎಸ್ /ಯುಬಿಸಿ-7/81/ ಯುಸಿಎಸ್/ 2022-23 ದಿ: 28-03-2023** ರನ್ವಯ ರಡ್ಡಿ ಸಹಕಾರ ಬ್ಯಾಂಕ ನಿಯಮಿತ, ಧಾರವಾಡ ಈ ಬ್ಯಾಂಕಿನಲ್ಲಿ ಖಾಲಿ ಇರುವ ಈ ಕೆಳಗೆ ನಮೂದಿಸಲ್ಪಟ್ಟ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಆನ್ ಲೈನ್ [Online] ಮುಖಾಂತರ ಆಹ್ವಾನಿಸಲಾಗಿದೆ. ಬ್ಯಾಂಕಿನ ವೆಬ್‌ಸೈಟ್: **www.raddibank.com** ಗೆ ಅಪಲೋಡ ಮಾಡಿ ಅರ್ಜಿ ಸಲ್ಲಿಸತಕ್ಕದ್ದು.

| ಕ್ರ. ಸಂಖ್ಯೆ | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ |
|---|---|---|---|
| 01 | ಕಿರಿಯ ಸಹಾಯಕ | 24 | 17650-450-19000-500-21000-600-24600-700-28800-800-32000 |
| 02 | ಸೇವಕ/ ಜವಾನ | 10 | 12500-250-13000-300-14200-350-15600-400-17200-450-19000-500-21000-600-24000 |

(ಬ್ಯಾಂಕಿನ ನಿಯಮಾನುಸಾರ ಮಂಜೂರಾತಿ ಮಾಡಲ್ಪಡುವ ತುಟ್ಟಿ ಭತ್ಯೆ ಹಾಗೂ ಇತರ ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವದು)

[1] **ಕಿರಿಯ ಸಹಾಯಕ ಹುದ್ದೆಗಳಿಗೆ ವಿದ್ಯಾರ್ಹತೆ:**

(ಎ) ಮಾನ್ಯತೆ ಪಡೆದ ಕರ್ನಾಟಕ ರಾಜ್ಯದ ಅಂಗೀಕೃತ ವಿಶ್ವವಿದ್ಯಾಲಯದಿಂದ ಬಿ.ಎ./ಬಿ.ಕಾಂ/ಬಿ.ಎಸ್.ಸಿ/ಬಿ.ಸಿ.ಎ/ತತ್ಸಮಾನ ಪದವಿಯಲ್ಲಿ ತೇರ್ಗಡೆಯಾಗಿರಬೇಕು, **ಹಾಗೂ**

ಹೈಯರ್ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜಮೆಂಟ (ಎಚ್‌ಡಿಸಿಎಂ)/ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜಮೆಂಟ (ಡಿಸಿಬಿಎಂ)/ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜಮೆಂಟ (ಡಿಯುಸಿಬಿಎಂ)/ ಜನರಲ್ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜಮೆಂಟ (ಜಿಡಿಸಿ)/ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜಮೆಂಟ (ಡಿಸಿಎಂ) ಕೋರ್ಸಗಳಲ್ಲಿ ಉತ್ತೀರ್ಣರಾಗಿರತಕ್ಕದ್ದು.

(ಬಿ) ಓದಲು, ಬರೆಯಲು ಅರ್ಥ ಮಾಡಿಕೊಳ್ಳಲು ಮತ್ತು ಮಾತನಾಡಲು ಕನ್ನಡ, ಇಂಗ್ಲೀಷ ಮತ್ತು ಹಿಂದಿ ಭಾಷೆಯ ಜ್ಞಾನವಿರತಕ್ಕದ್ದು.

(ಸಿ) ಬ್ಯಾಂಕಿಂಗ್ ಕ್ಷೇತ್ರದಲ್ಲಿ ಎರಡು ವರ್ಷ ಅನುಭವವಿರುವ ಅಭ್ಯರ್ಥಿಗಳಿಗೆ / ಉನ್ನತ ವ್ಯಾಸಂಗ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವದು.

**ವಿ.ಸೂ: (ಎ) ದಲ್ಲಿ ಸೂಚಿಸಿದ ಪದವಿ ಹಾಗೂ ಕೋರ್ಸನಲ್ಲಿ ಉತ್ತೀರ್ಣರಾಗದಿರುವವರ ಅರ್ಜಿಯನ್ನು ಅರ್ಹತೆ ಹೊಂದಿಲ್ಲವೆಂದು ತಿರಸ್ಕರಿಸಲಾಗುವದು.**

[2] **ಸೇವಕ/ ಜವಾನ ಹುದ್ದೆಗಳಿಗೆ ವಿದ್ಯಾರ್ಹತೆ :**

(ಎ) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರತಕ್ಕದ್ದು.

(ಬಿ) ಓದಲು, ಬರೆಯಲು ಅರ್ಥ ಮಾಡಿಕೊಳ್ಳಲು ಮತ್ತು ಸರಾಗವಾಗಿ ಮಾತನಾಡಲು ಸಾಮರ್ಥ್ಯವಿರುವಷ್ಟು ಕನ್ನಡ ಭಾಷೆಯ ಜ್ಞಾನವಿರತಕ್ಕದ್ದು.

[3] **ವಯೋಮಿತಿ: ಕಿರಿಯ ಸಹಾಯಕ ಮತ್ತು ಸೇವಕ/ ಜವಾನ ಹುದ್ದೆಗಳಿಗೆ**

ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯು **ದಿನಾಂಕ: 05-11-2022 ಕ್ಕೆ ಕನಿಷ್ಠ 18 ವಯಸ್ಸು ಹೊಂದಿರತಕ್ಕದ್ದು ಹಾಗೂ ದಿನಾಂಕ: 05-11-2022 ಕ್ಕೆ ಈ ಕೆಳಕಂಡ ಕೆಟಗರಿಯಲ್ಲಿ ಬರುವ ಅಭ್ಯರ್ಥಿಯು ಗರಿಷ್ಠ ವಯೋಮಿತಿ ಮೀರತಕ್ಕದ್ದಲ್ಲ.**

(ಎ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗಗಳ ವರ್ಗ -1ಕ್ಕೆ ಸೇರಿದ ಅಭ್ಯರ್ಥಿಗಳು - 40 ವರ್ಷಗಳು

(ಬಿ) ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು (2-ಎ,2-ಬಿ, 3-ಎ ಮತ್ತು 3-ಬಿ ಎಂದು ವರ್ಗೀಕರಿಸಲಾದ ಅಭ್ಯರ್ಥಿಗಳು)-38 ವರ್ಷಗಳು

(ಸಿ) ಇತರೇ ಸಾಮಾನ್ಯ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು -35 ವರ್ಷಗಳು

[4] **ಲಿಖಿತ ಪರೀಕ್ಷೆ ಹಾಗೂ ಸಂದರ್ಶನ**

ನೇಮಕಾತಿ ಪ್ರಕ್ರಿಯೆಯು ಕಿರಿಯ ಸಹಾಯಕ ಹುದ್ದೆಗಳಿಗೆ ಮಾತ್ರ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನಗಳನ್ನು ಒಳಗೊಂಡಿರುತ್ತದೆ. ಸೇವಕ/ ಜವಾನ ಹುದ್ದೆಗಳಿಗೆ ಕೇವಲ ಮೌಖಿಕ ಸಂದರ್ಶನ ಒಳಗೊಂಡಿರುತ್ತದೆ.

**ಲಿಖಿತ ಪರೀಕ್ಷೆಯು ಈ ಕೆಳಗಿನ ವಿಷಯಗಳನ್ನೊಳಗೊಂಡ 200 ಅಂಕಗಳ ಒಂದು ಪ್ರಶ್ನೆ ಪತ್ರಿಕೆಯನ್ನು ಹೊಂದಿರುತ್ತದೆ.**

| ಅ.ನಂ | ವಿಷಯ | ಅಂಕಗಳು |
|---|---|---|
| 01 | ಕನ್ನಡ ಭಾಷೆ | 50 ಅಂಕಗಳು |
| 02 | ಸಾಮಾನ್ಯ ಇಂಗ್ಲೀಷ | 25 ಅಂಕಗಳು |
| 03 | ಸಾಮಾನ್ಯ ಜ್ಞಾನ | 25 ಅಂಕಗಳು |
| 04 | ಸಹಕಾರಿ ವಿಷಯ | 50 ಅಂಕಗಳು |
| 05 | ಭಾರತದ ಸಂವಿಧಾನ | 25 ಅಂಕಗಳು |
| 06 | ಸಮಾಜದ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯಗಳಿಗೆ | 25 ಅಂಕಗಳು |
| | ಒಟ್ಟು | 200 ಅಂಕಗಳು |

ಈ ರೀತಿ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ ಅಭ್ಯರ್ಥಿಗಳನ್ನು 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವದು. ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳನ್ನು ಶೇ.85 ಕ್ಕಿಳಿಸಿ, ಉಳಿದ ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವದು.

ಸೇವಕ/ ಜವಾನ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಆಧಾರದ ಮೇಲೆ 1:5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವದು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳನ್ನು ಶೇ.85 ಕ್ಕಿಳಿಸಿ, ಉಳಿದ ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವದು.

. . . 2

ಲಿಖಿತ ಪರೀಕ್ಷೆ/ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಹಾಜರಾಗತಕ್ಕದ್ದು. ಮತ್ತು ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನಗಳ ದಿನಾಂಕ ಮತ್ತು ವಿವರಗಳನ್ನು ಬ್ಯಾಂಕಿನ ವೆಬ್ ಸೈಟ : **www.raddibank.com** ನಲ್ಲಿ ಪ್ರಕಟಿಸಲಾಗುವದು.

**[5] ಅರ್ಜಿ ಶುಲ್ಕ :**

(ಎ) ಕಿರಿಯ ಸಹಾಯಕ ಹುದ್ದೆಗೆ ರೂ.1,000/- + GST ರೂ 180/- ಒಟ್ಟು ರೂ 1,180/-

(ಬಿ) ಸೇವಕ/ ಜವಾನ ಹುದ್ದೆಗೆ ರೂ.500/- GST ರೂ 90/- ಒಟ್ಟು ರೂ 590/-

(ಸಿ) ಅರ್ಜಿಯ ಶುಲ್ಕವನ್ನು ಪಾವತಿಸುವದಕ್ಕೆ ಡೆಬಿಟ್/ ಕ್ರೆಡಿಟ್/ ಆನ್-ಲೈನ್/ ಯುಪಿಆಯ್ ಮೂಲಕ ನಿಗದಿತ ಶುಲ್ಕ ಪಾವತಿ ಮಾಡತಕ್ಕದ್ದು, ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವದು.

(ಡಿ) ಅರ್ಜಿ ಸಲ್ಲಿಕೆಗೆ ನಿಗದಿಪಡಿಸಿದ ಕೊನೆಯ ದಿನಾಂಕದ ನಂತರದ ಶುಲ್ಕವನ್ನು ಸಂದಾಯ ಮಾಡಿದಲ್ಲಿ ಅಂತವರ ಅರ್ಜಿಯನ್ನು ತಿರಸ್ಕರಿಸಲಾಗುವದು. ಡಿಡಿ/ ಚೆಕ್/ ಪೋಸ್ಟಲ್ ಆರ್ಡರ / ಮನಿ ಆರ್ಡರ ಇವುಗಳನ್ನು ಪರಿಗಣಿಸಲಾಗುವದಿಲ್ಲ.

(ಇ) ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವದಿಲ್ಲ ಅಥವಾ ಇತರ ಯಾವುದೇ ನೇಮಕಾತಿಗೆ ಹೊಂದಾಣಿಕೆ ಮಾಡಿಕೊಳ್ಳುವದಿಲ್ಲ.

(ಎಫ್) ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತವರ ಅರ್ಜಿಯನ್ನು ತಿರಸ್ಕರಿಸಲಾಗುವದು.

(ಜಿ) ಅರ್ಜಿಗಳನ್ನು ಭರ್ತಿಮಾಡಲು ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕವು ಸಾರ್ವತ್ರಿಕ ರಜಾದಿನವಾಗಿ ಘೋಷಿಸಲ್ಪಟ್ಟರೆ ಮುಂದಿನ ಕೆಲಸದ ದಿನವು ಅರ್ಜಿಗಳನ್ನು ಭರ್ತಿ ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕವಾಗುವದು.

**[6] ಅರ್ಜಿ ಸಲ್ಲಿಸುವ ವಿಧಾನ :**

(ಎ) ಅಭ್ಯರ್ಥಿಗಳು ಬ್ಯಾಂಕಿನ ಅಧೀಕೃತ ವೆಬ್‌ಸೈಟ್: www.raddibank.com ನಲ್ಲಿ ಅರ್ಜಿಯಲ್ಲಿನ ಎಲ್ಲ ವಿವರಗಳನ್ನು ಭರ್ತಿಮಾಡಿ ಈ ಕೆಳಕಂಡ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸ್ಕ್ಯಾನ್ ಮಾಡಿ ಆನ್‌ಲೈನಲ್ಲಿ ಅಪಲೋಡ ಮಾಡತಕ್ಕದ್ದು

(1) ವಯಸ್ಸು ದೃಢೀಕರಣ ಕುರಿತು ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ ಎಲ್.ಸಿ./ ಟಿ.ಸಿ.ಪತ್ರ.

(2) ವಿದ್ಯಾರ್ಹತೆ ಕುರಿತು ಎಸ್.ಎಸ್.ಎಲ್.ಸಿ. ಮತ್ತು ಪದವಿಗೆ ಸಂಬಂಧಪಡುವ ಎಲ್ಲ ಅಂಕಪಟ್ಟಿಗಳು, ಪ್ರಮಾಣ ಪತ್ರಗಳು ಮತ್ತು ಅನುಭವದ ಕುರಿತು ಪ್ರಮಾಣ ಪತ್ರಗಳು.

(3) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ರಾಜ್ಯ ಸರ್ಕಾರವು ನಿಗದಿಪಡಿಸಿದ ನಮೂನೆಯಲ್ಲಿ ಸಂಬಂಧಪಡುವ ಇಲಾಖೆಯಿಂದ ದೃಢೀಕರಿಸಲ್ಪಟ್ಟ ಪ್ರಮಾಣ ಪತ್ರಗಳು.

(4) ಇತ್ತೀಚಿನ ಪಾಸ್ ಪೋರ್ಟ ಅಳತೆಯ ಭಾವಚಿತ್ರ ಮತ್ತು ಅಭ್ಯರ್ಥಿಯ ಸಹಿ.

(5) ವಿಳಾಸ ಸಮರ್ಥಿಸುವ ದಾಖಲೆಗಳು (ಆಧಾರ ಕಾರ್ಡ/ ಓಟರ್ಸ ಆಯ್.ಡಿ./ ಡ್ರೈವಿಂಗ್ ಲೈಸೆನ್ಸ/ ರೇಶನ್ ಕಾರ್ಡ/ ಸರ್ಕಾರದಿಂದ ನೀಡಲ್ಪಡುವ ಪ್ರಮಾಣ ಪತ್ರ).

**[7] ಅಭ್ಯರ್ಥಿಗಳು ಸಂದರ್ಶನ/ ಪರಿಶೀಲನೆ ಕಾಲಕ್ಕೆ ಸಲ್ಲಿಸಬೇಕಾದ ದಾಖಲೆಗಳು :**

(ಎ) ಆನ್‌ಲೈನ್‌ನಲ್ಲಿ ಅಪಲೋಡ ಮಾಡಿದ ಅರ್ಜಿಯೊಂದಿಗೆ ಸಲ್ಲಿಸಿದ ಎಲ್ಲ ದಾಖಲಾತಿ/ ಮಾಹಿತಿಗಳ ಮೂಲ ಪ್ರತಿಗಳು.

(ಬಿ) ಮಹಿಳಾ ಅಭ್ಯರ್ಥಿಗಳ ಹೆಸರಿನಲ್ಲಿ ಬದಲಾವಣೆ ಆಗಿದ್ದಲ್ಲಿ ಈ ಬಗ್ಗೆ ನೋಟರಿ ದೃಢೀಕೃತ ಅಫಿಡವಿಟ್.

**[8] ಅರ್ಜಿ ಸಲ್ಲಿಕೆಗೆ ನಿಗದಿಪಡಿಸಿದ ಅವಧಿ :**

| | |
|---|---|
| ಪ್ರಾರಂಭದ ದಿನಾಂಕ: | 26-07-2023 ರ ಬೆಳಿಗ್ಗೆ 11.30 ರಿಂದ |
| ಕೊನೆಯ ದಿನಾಂಕ: | 22-08-2023 ರ ಸಂಜೆ 4.00 ರ ವರೆಗೆ |

**[9] ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು.**

1. ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ www.raddibank.com ಮೂಲಕ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಪೂರ್ವದಲ್ಲಿ ನೇಮಕಾತಿ ಪ್ರಕಟಣೆ ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಓದಿ ಮುಂದುವರಿಯುವುದು.
2. ಮೊಬೈಲ್ ಕ್ಯಾಮರಾದಿಂದ ಸೆರೆ ಹಿಡಿದ ಸ್ಪಷ್ಟತೆ ಇಲ್ಲದಿರುವ ದಾಖಲಾತಿಗಳನ್ನು /ಮಾಹಿತಿಗಳನ್ನು ಅಪ್‌ಲೋಡ ಮಾಡಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಸೇವಾ ಅನುಭವದ ಪ್ರಮಾಣ ಪತ್ರ ಸಲ್ಲಿಸುವವರು ಆಯಾ ಸಂಸ್ಥೆಯಿಂದ ಪಡೆದ ಪ್ರಮಾಣ ಪತ್ರವನ್ನು ಸ್ವಯಂ ದೃಡೀಕರಿಸಿ ಅಪ್‌ಲೋಡ್ ಮಾಡತಕ್ಕದ್ದು.
4. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊರತುಪಡಿಸಿ ಇತರೇ ಯಾವುದೇ ಸಮನಾಂತರ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ.
5. ಅರ್ಜಿಯಲ್ಲಿ ನಮೂದಿಸಿರುವ ಅಂಕ ಪಟ್ಟಿಗಳು/ ಇತರೇ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವದಿಲ್ಲ.
6. ಆಯ್ಕೆಯಾದ ನಂತರ ಅಭ್ಯರ್ಥಿಗಳ ದಾಖಲಾತಿಗಳ ನೈಜತೆಯನ್ನು ಸಂಬಂಧಪಟ್ಟ ಸಂಸ್ಥೆ/ ಪ್ರಾಧಿಕಾರ /ವಿಶ್ವ ವಿದ್ಯಾನಿಲಯಗಳಿಂದ ದೃಡೀಕರಿಸಿ ಕೊಳ್ಳುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
7. ಅಗತ್ಯ ದಾಖಲಾತಿಗಳ ಸೈಜು, ಗಾತ್ರ ಇತ್ಯಾದಿಗಳು ಅಪ್‌ಲೋಡ್ ಮಾಡುವ ಸಂದರ್ಭದಲ್ಲಿ ಕಂಪ್ಯೂಟರ ಪರದೆಯಲ್ಲಿ ಬರುವ ಗಾತ್ರಕ್ಕನುಗುಣವಾಗಿ ಸ್ಪಷ್ಟವಾಗಿ ಕಾಣುವಂತೆ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು.
8. ನೇಮಕಾತಿ ಪ್ರಕ್ರಿಯೆಯು ಕರ್ನಾಟಕ ಸರಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನಗಳು ಹಾಗೂ ಆದೇಶಕ್ಕೆ ಒಳಪಟ್ಟಿರುತ್ತದೆ.
9. ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೇ ಮುಂದೂಡುವ ಮತ್ತು ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
10. ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷದ ಅವಧಿಯ ಪರೀಕ್ಷಾರ್ಹ ಸೇವೆಯಲ್ಲಿ ಇರಬೇಕಾಗುವದು. ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕು ಸೂಚಿಸಲ್ಪಟ್ಟ ಭದ್ರತೆಯೊಂದಿಗೆ ನಿಯೋಜಿಸಿದ ಶಾಖೆಯಲ್ಲಿ ಕಾರ್ಯನಿರ್ವಹಿಸಬೇಕು ಹಾಗೂ ಅಭ್ಯರ್ಥಿಯ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಅಂತವರ ಸೇವೆಯನ್ನು ಖಾಯಂಗೊಳಿಸಲಾಗುವುದು.
11. ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿನ ನಿಯಮಾನುಸಾರ ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ವ ನಿಯಮಗಳಿಗೊಳಪಟ್ಟು ಕಾರ್ಯನಿರ್ವಹಿಸಬೇಕಾಗುತ್ತದೆ.
12. ಯಾವುದೇ ಅಭ್ಯರ್ಥಿಗೆ ಸಂದರ್ಶನಕ್ಕೆ ಕರೆ ಬಂದಿಲ್ಲವಾದರೆ, ಸಂದರ್ಶನಕ್ಕೆ ಅರ್ಹತೆ ಹೊಂದಿಲ್ಲವೆಂದು ತಿಳಿಯತಕ್ಕದ್ದು. ಮತ್ತು ಈ ಕುರಿತು ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದ ಇರುವದಿಲ್ಲ.
13. ಖೊಟ್ಟಿ ಮಾಹಿತಿ/ ದಾಖಲಾತಿಗಳ ಸಲ್ಲಿಕೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ.

. . .3

[10] <u>ವಿಶೇಷ ಸೂಚನೆ:</u>

* ಲಿಖಿತ ಪರೀಕ್ಷೆಗೆ ಅರ್ಹವಿರುವ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶ ಪತ್ರ ಹಾಗೂ ಲಿಖಿತ ಪರೀಕ್ಷೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು. ಅರ್ಹ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಪ್ರವೇಶ ಪತ್ರ (Hall Ticket) ವನ್ನು ಅಧಿಕೃತ ವೆಬ್‌ಸೈಟ್: www.raddibank.com ದಿಂದ ಡೌನಲೋಡ ಮಾಡಿಕೊಂಡು ಲಿಖಿತ ಪರೀಕ್ಷೆಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಹಾಜರಪಡಿಸತಕ್ಕದ್ದು. ಲಿಖಿತ ಪರೀಕ್ಷೆಗೆ/ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಿಂದಲೇ ಹಾಜರಾಗತಕ್ಕದ್ದು.

* ಆನಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Helpline):9036072155 ನ್ನು ಸಂಪರ್ಕಿಸಿ ಅಗತ್ಯ ಮಾಹಿತಿಗಳನ್ನು ಪಡೆಯಬಹುದು.

ನೇಮಕಾತಿ ಉಪ ಸಮಿತಿಯ ಸದಸ್ಯ ಕಾರ್ಯದರ್ಶಿ
ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ರಡ್ಡಿ ಸಹಕಾರ ಬ್ಯಾಂಕ ನಿಯಮಿತ, ಧಾರವಾಡ.